ಅ) ಮಸ್ಕಿ ನಾಲಾ ಯೋಜನೆ ಯಾವ ಹಂತದಲ್ಲಿದೆ.
ಆ) ಈ ಯೋಜನೆಗೆ ಮಂಜೂರಾದ ಹಣವೆಷ್ಟು ;
ಇ) ಇಲ್ಲಿಯವರೆಗೆ ಎಷ್ಟು ಹಣ ಖರ್ಚಾಗಿದೆ
ಈ) ಎಷ್ಟು ಎಕರೆ ಪ್ರದೇಶ ಇಲ್ಲಿಯವರೆಗೆ ನೀರಾವರಿಯಾಗಿದೆ;

ಶ್ರೀ ಓಂ ಪ್ರಕಾಶ್ ಕಣಗಲಿ (ಬೃಹತ್ ನೀರಾವರಿ ರಾಜ್ಯ ಸಚಿವರು) :

ಅ) ಎಡದಂಡೆ ಮಣ್ಣಿನ ವಡ್ಡಿನ ಕೆಲಸ ಹಾಗೂ ಮುಖ್ಯ ತೂಬಿನ ಕೆಲಸ ಮುಗಿದಿದೆ. ಬಲದಂಡೆ ಮಣ್ಣಿನ ವಡ್ಡಿನ ಕೆಲಸ ಹಾಗೂ ಮುಖ್ಯ ತೂಬಿನ ಕೆಲಸ ಪ್ರಗತಿಯಲ್ಲಿದೆ.
ಆ) ಈ ಯೋಜನೆಯ ಮೂಲ ಅಂದಾಜು ಮೊತ್ತ ರೂ.311.00 ಲಕ್ಷಗಳಾಗಿರುತ್ತದೆ. ಪರಿಷ್ಕೃತ ಅಂದಾಜು ಮೊತ್ತ ರೂ. 1429.80 ಲಕ್ಷಗಳಾಗಿರುತ್ತದೆ. (ಇದು 84-85ರ ದರಪಟ್ಟಿಯ ಆಧಾರದ ಮೇಲೆ)
ಇ) ಜನವರಿ 1993ರ ವರೆಗೆ ಈ ಯೋಜನೆಗೆ ರೂ.384.00 ಲಕ್ಷಗಳು ವೆಚ್ಚವಾಗಿರುತ್ತದೆ.
ಈ) ಇನ್ನೂ ನೀರಾವರಿ ಮಾಡಬೇಕಾಗಿದೆ.

ವಿಷಯ : 1992-93ನೇ ಸಾಲಿನಲ್ಲಿ ಬೃಹತ್ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಹಣ.

Q : 371

ಶ್ರೀ ಬಿ. ಹಂಪನ ಗೌಡ (ಸಿಂಧನೂರು) : ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ

ಅ) 1992-93ನೇ ಸಾಲಿನಲ್ಲಿ ಬೃಹತ್ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಹಣವೆಷ್ಟು?
ಆ) ರಾಜ್ಯದಲ್ಲಿರುವ ಬೃಹತ್ ನೀರಾವರಿ ಯೋಜನೆಗಳೆಷ್ಟು ಹಾಗೂ ಯಾವ ವರ್ಷದಲ್ಲಿ ಈ ಯೋಜನೆಗಳಿಗೆ ಶಂಕುಸ್ಥಾಪನೆ ಮಾಡಲಾಗಿದೆ.
ಇ) ಈ ಯೋಜನೆಗಳು ಪೂರ್ಣಗೊಳ್ಳಲು ಮಂಜೂರಾದ ಹಣವೆಷ್ಟು ; ಮತ್ತು ಇಲ್ಲಿಯವರೆಗೆ ಯೋಜನೆಗಳಿಗೆ ಖರ್ಚಾದ ಹಣವೆಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪ ಮುಖ್ಯಮಂತ್ರಿಗಳು) :

ಅ) 1992-93ನೇ ಸಾಲಿನಲ್ಲಿ ನೀರಾವರಿ ಯೋಜನೆಗಳಿಗೆ ನಿಗದಿಪಡಿಸಿದ ಹಣ 405.40 ಕೋಟಿ ರೂ.ಗಳು.
ಆ) ಮತ್ತು ಇ)
ವಿವರಗಳನ್ನು ಲಗತ್ತಿಸಲಾಗಿರುವ ಪಟ್ಟಿಯಲ್ಲಿ ಕೊಡಲಾಗಿದೆ.

ವಿಷಯ : 1992-93ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸಿದ

ಹಣ.

Q : 369

ಶ್ರೀ ಬಿ. ಹಂಪನಗೌಡ (ಸಿಂಧನೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸರ್ಕಾರದಿಂದ 1992-93ನೇ ಸಾಲಿನ ಆಯವ್ಯಯದಲ್ಲಿ ಲೋಕೋಪಯೋಗಿ ಇಲಾಖೆಗೆ ಒದಗಿಸಿದ ಹಣವೆಷ್ಟು ;

ಆ) ಇಲಾಖೆಯಲ್ಲಿರು ಹೆಡ್ ಆಫ್ ಅಕೌಂಟ್‌ಗಳೆಷ್ಟು ;

ಇ) ಸರಕಾರದಿಂದ ಇಲಾಖೆಗೆ ಬಿಡುಗಡೆ ಆದ ಹಣದಲ್ಲಿ ಯಾವ ಯಾವ ಹೆಡ್ ಆಫ್ ಅಕೌಂಟಿಗೆ ಎಷ್ಟೆಷ್ಟು ಹಣ ಇಲಾಖೆ ನಿಗದಿಪಡಿಸಿದೆ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳು :

	(ಲಕ್ಷ ರೂ.ಗಳು)
1. ರಸ್ತೆ ಮತ್ತು ಸೇತುವೆಗಳ ಶೀರ್ಷಿಕೆ ಅಡಿ	6044.30
2. ಕಟ್ಟಡಗಳ ಶೀರ್ಷಿಕೆ ಅಡಿ	6698.49
3. ಆಡಳಿತ ಯಂತ್ರ ಮತ್ತು ಸಾಮಗ್ರಿಗಳು ಇತ್ಯಾದಿ	4302.44
ಒಟ್ಟು	17045.23

ಆ) 28 ಲೆಕ್ಕ ಶೀರ್ಷಿಕೆಗಳು.

ಇ) ಅನುಬಂಧದಲ್ಲಿ ವಿವರಗಳನ್ನು ನೀಡಿದೆ.

ಅನುಬಂಧ - 1

1992-93ನೇ ಸಾಲಿಗೆ ಲೋಕೋಪಯೋಗಿ ಇಲಾಖೆಗೆ ಲೆಕ್ಕ ಶೀರ್ಷಿಕೆವಾರು ನೀಡಿರುವ ಅನುದಾನ

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಕಾಮಗಾರಿ	1992-93ನೇ ಸಾಲಿನ ಅನುದಾನ

	ಅ) ಯೋಜನೆ ಕಟ್ಟಡಗಳು:		
1.	2059	ಲೋಕೋಪಯೋಗಿ ಕಾಮಗಾರಿ	270.00
2.	2216	ಗೃಹ ನಿರ್ಮಾಣ	160.00
3.	2210	ವೈದ್ಯಕೀಯ ಮತ್ತು ಜನಾರೋಗ್ಯ	46.87
4.	2235	ಸಾಮಾಜಿಕ ಭದ್ರತಾ ಮತ್ತು ಕಲ್ಯಾಣ	29.00
5.	2403	ಪಶುಸಂಗೋಪನೆ	23.00
6.	3452	ಪ್ರವಾಸೋದ್ಯಮ	5.00
7.	4059	ಲೋಕೋಪಯೋಗಿ ಕಾಮಗಾರಿ	1857.00
8.	4216	ಗೃಹನಿರ್ಮಾಣ ಮೇಲಣ ಬಂಡವಾಳ ವೆಚ್ಚ	387.00
9.	4202	ಶಿಕ್ಷಣ ಕಲೆ ಮತ್ತು ಸಂಸ್ಕೃತಿಯ ಮೇಲಣ ಬಂಡವಾಳ	666.12
10.	4210	ವೈದ್ಯಕೀಯ ಮತ್ತು ಜನಾರೋಗ್ಯ ಮೇಲಣ ಬಂಡವಾಳ	1166.38
11.	4211	ಕುಟುಂಬ ಯೋಜನೆ ಮೇಲಣ ಬಂಡವಾಳ	43.10
12.	4217	ನಗರಾಭಿವೃದ್ಧಿ ಮೇಲಣ ಬಂಡವಾಳ	17.24
13.	4220	ವಾರ್ತಾ ಮತ್ತು ಪ್ರಚಾರ ಇಲಾಖೆಯ ಮೇಲಣ ಬಂಡವಾಳ	30.17
14.	4235	ಸಾಮಾಜಿಕ ಭದ್ರತೆ ಮೇಲಣ ಬಂಡವಾಳ	151.82
15.	4250	ಇತರ ಸಾಮಾಜಿಕ ಮತ್ತು ಸಾಮುದಾಯಿಕ ಸೇವೆಯ ಮೇಲಣ ಬಂಡವಾಳ	21.55
16.	4401	ಸಸ್ಯ ಸಂಗೋಪನಾ ಮೇಲಣ ಬಂಡವಾಳ	30.55
17.	4403	ಪಶುಸಂಗೋಪನದ ಮೇಲಣ ಬಂಡವಾಳ	19.88
18.	4405	ಮಿನುಗಾರಿಕೆ	122.55
19.	4851	ಗ್ರಾಮೋದ್ಯೋಗ ಮತ್ತು ಸಣ್ಣಪುಟ್ಟ ಉದ್ಯಮ	16.81
20.	5053	ನಾಗರೀಕ ವಿಮಾನಯಾನ	-
21.	5452	ಪ್ರವಾಸೋದ್ಯಮ	10.45
22.	2230	ಕಾರ್ಮಿಕ ಮತ್ತು ಉದ್ಯೋಗ	35.00
23.	2405	ಮೀನುಗಾರಿಕೆ	10.00
24.	2401	ವ್ಯವಸಾಯ	48.00
		ಒಟ್ಟು	5167.49
	ಆ) ಯೋಜನೆ ರಸ್ತೆ ಮತ್ತು ಸೇತುವೆಗಳು :		
25.	3054	ರಸ್ತೆ ಮತ್ತು ಸೇತುವೆಗಳು	5.00
26.	5054	ರಸ್ತೆ ಮತ್ತು ಸೇತುವೆ ಮೇಲಣ ಬಂಡವಾಳ	1005.00
		ಒಟ್ಟು	1010.00

	೫) ಯೋಜನೇತರ	
27.	3054 ರಸ್ತೆ ಮತ್ತು ಸೇತುವೆಗಳು	5034.30
	(ನಿರ್ವಹಣೆ ಮರುಡಾಂಬರೀಕರಣ ಮತ್ತು ವಿಶೇಷ ದುರಸ್ತಿ)	
28.	ಈ) (1) 2203 ತಾಂತ್ರಿಕ ಶಿಕ್ಷಣ	17.00
	(2) 2210 ವೈದ್ಯಕೀಯ ಮತ್ತು ಜನಾರೋಗ್ಯ	50.00
		67.00
	(3) 2059 (ಅ) ಆಡಳಿತ	3931.52
	(ಆ) ಯಂತ್ರ ಮತ್ತು ಸಾಮಗ್ರಿ	370.92
		4302.44
	(4) 2059 : ಕಟ್ಟಡಗಳು (ನಿರ್ವಹಣೆ)	1029.00
	(5) 2216 : ಅ) ಗೃಹ ನಿರ್ಮಾಣ (ನಿರ್ವಹಣೆ)	275.00
	ಆ) ಪೀಠೋಪಕರಣ	160.00
		1464.00
	ಒಟ್ಟು	17045.23

ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಬೃಹತ್ ನೀರಾವರಿ ಯೋಜನೆಯ ಹೆಸರು	ಯೋಜನೆಗೆ ಶಂಕುಸ್ಥಾಪನೆಗೆ ಮಾಡಿದ ವರ್ಷ	ಯೋಜನೆ ಪೂರ್ಣಗೊಳ್ಳಲು ಮಂಜೂರಾದ ಹಣ (ಕೋಟಿ ರೂ.ಗಳಲ್ಲಿ)	ಯೋಜನೆಯ ಮೇಲೆ ಜನವರಿ 93ರ ಅಂತ್ಯದ ವರೆಗೆ ಖರ್ಚು ಮಾಡಲಾದ ಹಣ (ಕೋಟಿ ರೂ. ಗಳಲ್ಲಿ)
1	2	3	4	5
1.	ಕೃಷ್ಣಾ ಮೇಲ್ದಂಡೆ - 1	1964	1214.97	804.32
2.	ಹಿಪ್ಪರಗಿ	1973	186.70	10.69
3.	ಘಟಪ್ರಭಾ - 3	1961	90.54	149.28

4.	ಮಲಪ್ರಭಾ	1963	162.00	291.46
5.	ಬೆನ್ನಿತೋರ	1973	82.50	27.90
6.	ಭದ್ರಾ	@@	33.53	92.67
7.	ತುಂಗಭದ್ರಾ ಎಡದಂಡೆ ಕಾಲುವೆ *		172.80	122.47
8.	ತುಂಗಭದ್ರಾ ಬಲದಂಡೆ ಮೇಲ್ಗಾಲುವೆ *	1945	26.00	25.20
9.	ರಾಷ್ಟ್ರೀಯ ಜಲನಿರ್ವಹಣೆ ಯೋಜನೆ *	-	45.65	37.86
10.	ಘಾಧ್‌ಗಂಗಾ	-	159.04	4.73
11.	ಮಾರ್ಕಂಡೇಯ @	-	84.69	-
12.	ಮಹದಾಯಿ @	-	24.00	0.20
13.	ರಾಮಥಾಲ್ ಏತ ನೀರಾವರಿ @	-	-	-
14.	ಭೀಮಾ ಫ್ಲೋ @	-	220.00	0.07
15.	ಭೀಮಾ ಏತ ನೀರಾವರಿ	1992	94.17	0.14
16.	ತುಂಗಾ ಮೇಲ್ದಂಡೆ	1991	379.87	0.44
17.	ಕೃಷ್ಣ ರಾಜಸಾಗರ ಆಧುನೀಕರಣ	-	55.00	37.12
18.	ಹಾರಂಗಿ	1970	230.00	146.12
19.	ಹೇಮಾವತಿ	1965	588.00	522.20
20.	ಕಬಿನಿ	1957	390.00	194.28
21.	ಡಿ. ದೇವರಾಜ್ ಅರಸ್ ಕಾಲುವೆ	1979	58.10	39.78
22.	ಯಗಚಿ	1987	35.38	22.28
23.	ಕಾರಂಜ	1976	9.90	89.79
24.	ವರಾಹಿ	1980	122.00	3.17

@ ಮಂಜೂರಾತಿ ಇನ್ನೂ ದೊರೆಯಬೇಕಾಗಿದೆ.
@@ ಮಾಹಿತಿ ಇರುವುದಿಲ್ಲ.

ವಿಷಯ : ನೆಲಮಂಗಲ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿಗೆ ಒಳಪಟ್ಟಿರುವ ಕೆರೆಗಳ ದುಸ್ಥಿತಿ.

Q : 770

ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನೆಲಮಂಗಲ ತಾಲ್ಲೂಕಿನಲ್ಲಿರುವ ಸಣ್ಣ ನೀರಾವರಿಗೆ ಒಳಪಟ್ಟಿರುವ ಕೆರೆಗಳೆಷ್ಟು;
ಆ) ಆ ಪೈಕಿ ದುಸ್ಥಿತಿಯಲ್ಲಿರುವ ಕೆರೆಗಳು ಯಾವುವು ;
ಇ) ಈ ಕೆರೆಗಳನ್ನು ಸುಸ್ಥಿತಿಗೆ ತರಲು ಸರ್ಕಾರ ಕೈಗೊಂಡಿರುವ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮಗಳೇನು?

ಡಾ॥ ಆರ್. ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 154
ಆ) 39 (ವಿವರಗಳನ್ನು ಅನುಬಂಧದಲ್ಲಿ ನೀಡಿದೆ)